# ಶ್ರೀ ಶ್ರೀಶ್ರೀ 1008 ಶ್ರೀವಿದ್ಯಾಭೂಷಣತೀರ್ಥ ಶ್ರೀಪಾದಂಗಳವರಚರಿತ್ರೆ

(ಕ್ರೀ.ಶ.1988–1993)

**ಸಂತುಷ್ಟಸತತಮ್ ಯೋಗೀ ದೃಢಾತ್ಮಾ ದೃಢನಿಶ್ಚಯ: ।**
**ಯದೃಚ್ಛಾಲಾಭ ಸಂತುಷ್ಟಮ್ ಗುರುಶ್ರೇಷ್ಠಮ್ ನಮಾಮ್ಯಹಮ್ ॥**
**ಭಾಗವತ ಶಿರೋರತ್ನಮ್ ವಿಠ್ಠಲಕೃಷ್ಣ ಪೂಜಕಮ್ ।**
**ವಿದ್ಯಾಭೂಷಣ ತೀರ್ಥಾಖ್ಯಾಮ್ ವಂದೇ ಕಾಣ್ವ ಮಠಾಧಿಪಮ್ ॥**

ಶ್ರೀಶ್ರೀಶ್ರೀ 1008 ಶ್ರೀ ವಿದ್ಯಾಭೂಷಣ ತೀರ್ಥರು ಶ್ರೀಮತ್ ಕಣ್ವ ಮಠದ ಪೀಠಾಧಿಪತಿಗಳಾಗಿದ್ದ ಕಾಲ, ಕೆಲವೇ ವರ್ಷಗಳಾಗಿದ್ದರೂ (1988 ರಿಂದ 1993), ಶ್ರೀ ಮಠದ ಅಭಿವೃದ್ದಿಗೆ ಅವರ ಕೊಡುಗೆಗಳು ಅಪಾರವಾಗಿವೆ ಮತ್ತು ಮಹತ್ವವೆನಿಸಿವೆ. ಧಾರ್ಮಿಕ ಜಾಗೃತಿಗೆ ಅವರು ಕೈಕೊಂಡ ಶ್ರಮ ಅಗಾಧವಾದದು. ಶ್ರೀ ವಿದ್ಯಾಭೂಷಣರು ತಮ್ಮ ಹೆಸರಿಗೆ ಅನ್ವರ್ಥಕವಾಗುವ ರೀತಿಯಲ್ಲಿ, ಜ್ಞಾನಕಾರ್ಯಕ್ಕೆ ಒತ್ತು ನೀಡಿ ಅನೇಕ ಕೃತಿಗಳನ್ನು ರಚಿಸಿ, ಮುದ್ರಣಗೊಳಿಸಿದರು. ಸತತ ಸಂಚಾರದಲ್ಲಿದ್ದು, ಸಂನ್ಯಾಸ ಧರ್ಮದ ಪ್ರಮುಖ ಕರ್ತವ್ಯವಾದ "ಹರಿ ಸರ್ವೋತ್ತಮ ಹಾಗೂ ವಾಯು ಜೀವೋತ್ತಮ"ದ ಸಂದೇಶವನ್ನು ಎಲ್ಲರಿಗೂ ಪರಿಣಾಮಕಾರಿಯಾಗುವ ರೀತಿಯಲ್ಲಿ ಮನಮುಟ್ಟುವಂತೆ ಬೀರಿದರು. ಆರ್ಥಿಕವಾಗಿಯೂ ಮಠದ ಏಳ್ಗೆಗೆ ಹಲವು ಯೋಜನೆಗಳನ್ನು ರೂಪಿಸಿ, ಅಳವಡಿಸಿ ಕಾರ್ಯಗತ ವಾಗುವಂತೆ ನೋಡಿಕೊಂಡರು. ಶ್ರೀಮಠದ ಇತಿಹಾಸದಲ್ಲಿ ಪ್ರಪ್ರಥಮವಾಗಿ ಸಂಚಾರಕ್ಕೆಂದು ವಾಹನ ವ್ಯವಸ್ಥೆಯನ್ನು ಮಾಡಿದರು. ಶ್ರೀಮಠದ ವ್ಯಾಪ್ತಿಯನ್ನು ವಿಸ್ತರಿಸಿ, ದೇಶದ ವಿವಿಧ ಪ್ರಾಂತಗಳಲ್ಲಿ ಶ್ರೀಮತ್‌ಕಣ್ವ ಮಠದ ಪತಾಕೆಯನ್ನು ಹಾರಿಸಿ, ಪ್ರಚುರಗೊಳಿಸಿದರು. ಒಟ್ಟಿನಲ್ಲಿ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಕ್ಷೇತ್ರದಲ್ಲಿ ಶ್ರೀಮತ್‌ಕಣ್ವ ಮಠದ ಸರ್ವತೋಮುಖ ಏಳ್ಗೆಗೆ ಕಾರಣೀಭೂತರಾದರು.

ಪೂರ್ವಾಶ್ರಮದಲ್ಲಿ ಶ್ರೀಯುತ ಕೆ.ಟಿ.ಜೋಶಿ (ಶ್ರೀಯುತ ಕೃಷ್ಣಾಚಾರ್ಯ ತಿಮ್ಮಣ್ಣಾಚಾರ್ಯ ಜೋಶಿ) ಎಂದು ಪ್ರಚಲಿತರಾಗಿದ್ದ ಇವರು ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಹೂಲಗೇರಿ ಎಂಬ ಗ್ರಾಮದಲ್ಲಿ ಜನಿಸಿ ಬೆಳೆದು ಬಂದವರು. ಈ ಗ್ರಾಮ ಬಾಗಲಕೋಟೆಯಿಂದ ಅಂದಾಜು 14–15 ಕಿಲೋಮೀಟರ್ ದೂರದಲ್ಲಿದೆ. ಆ ಗ್ರಾಮದ ಏಕೈಕ ವೈದಿಕ ಮನೆತನವೆಂದು ಖ್ಯಾತಿ ಪಡೆದ ಈ ವಂಶದ ಮೂಲ ಪುರುಷರಾದ ಶ್ರೀ ಅನಂತಾಚಾರ್ಯರವರು ಮಹಾರಾಷ್ಟ್ರದ ಅಕ್ಕಲಕೋಟದಿಂದ ಬೀಳಗಿ ಎಂಬ ತಾಲ್ಲೂಕಿಗೆ ಅಂದಾಜು 200 ವರ್ಷಗಳ ಹಿಂದೆ ವಲಸೆಯಾಗಿ ಬಂದರೆಂದು ಹಿರಿಯರಿಂದ ಕೇಳಿ ಬಂದ ಮಾತು. ಬೀಳಗಿಯಿಂದ ಹೂಲಗೇರಿಗೆ ಬಂದು ನೆಲೆಸಿದ್ದು 1890–95 ಆಸುಪಾಸಿನಲ್ಲಿ. ಶ್ರೀಯುತ ಅನಂತಾಚಾರ್ಯರಿಗೆ ರಾಮಾಚಾರ್ಯ ಹಾಗೂ ಕೃಷ್ಣಾಚಾರ್ಯರೆಂಬ ಇಬ್ಬರು ಪುತ್ರರು. ಶ್ರೀ ಕೃಷ್ಣಾಚಾರ್ಯರಿಗೆ ತಿಮ್ಮಣ್ಣಾಚಾರ್ಯರೆಂಬ ಪುತ್ರರು. ಇವರಿಗೆ ಐದು ಪುತ್ರರು ಹಾಗೂ ಒಬ್ಬ ಪುತ್ರಿ – ಕ್ರಮವಾಗಿ ರಂಗಾಚಾರ್ಯ, ಕೃಷ್ಣಾಚಾರ್ಯ, ಗೋವಿಂದಾಚಾರ್ಯ, ಸುಭದ್ರಾ, ಅನಂತಾಚಾರ್ಯ ಹಾಗೂ

ವಸಂತಾಚಾರ್ಯರೆಂದು. ಈ ವಂಶಾವಳಿಯ ದ್ವಿತೀಯ ಪುತ್ರರೇ (ಶ್ರೀ ಕೃಷ್ಣಾಚಾರ್ಯ ತಿಮ್ಮಣ್ಣಾಚಾರ್ಯ ಜೋಶಿ) ಮುಂದೆ ತುರೀಯಾಶ್ರಮ ಸ್ವೀಕರಿಸಿ ಶ್ರೀ ಶ್ರೀ ಶ್ರೀ 1008 ಶ್ರೀ ವಿದ್ಯಾಭೂಷಣರಾಗಿ ವಿಜೃಂಭಿಸಿದರು.

ಜೋಶಿ ಮನೆತನವು ಪೌರೋಹಿತ್ಯ ಹಾಗೂ ಜ್ಯೋತಿಷ್ಯ ಶಾಸ್ತ್ರಗಳಿಗಾಗಿ, ತನ್ನ ಊರಿನಲ್ಲಷ್ಟೇ ಅಲ್ಲ, ಸುತ್ತಮುತ್ತಲಿನ ಹಲವಾರು ಗ್ರಾಮಗಳಿಗೆ ಹೆಸರುವಾಸಿಯಾಗಿ ಎಲ್ಲ ಜನರ ಪ್ರೀತ್ಯಾದರಗಳಿಗೆ ಪಾತ್ರವಾಗಿತ್ತು. ಹಿರಿಯ ಪುತ್ರರಾದ ಶ್ರೀರಂಗಾಚಾರ್ಯರು ಮನೆತನದ ವಿದ್ಯೆಗಳಾದ ಜ್ಯೋತಿಷ್ಯ ಹಾಗೂ ಪೌರೋಹಿತ್ಯಗಳನ್ನು ನಿರ್ವಹಿಸಲು ಮುಂದಾದರೆ, ದ್ವಿತೀಯ ಪುತ್ರರಾದ ಶ್ರೀ ಕೃಷ್ಣಾಚಾರ್ಯರು ಉಪನಯನಾನಂತರ ವಿದ್ಯಾಭ್ಯಾಸ ಮುಂದುವರೆಸಲು ಉತ್ಸುಕರಾದರು. ತಮ್ಮ ಎಂಟನೆಯ ವರ್ಷದಲ್ಲೇ ತಮ್ಮ ಗ್ರಾಮದಿಂದ ಹೊರಬಂದು ಕೃಷ್ಣಾ ತೀರದ ಗಲಗಲಿ ಎಂಬ ಗ್ರಾಮದಲ್ಲಿ ಪ್ರಾಥಮಿಕ ಶಾಸ್ತ್ರಾಭ್ಯಾಸ ಪ್ರಾರಂಭಿಸಿದರು. ಅಲ್ಲಿಂದ ತಮ್ಮ ಇಪ್ಪತ್ತರೆಡು ವಯಸ್ಸಿನವರೆಗೂ, ಧಾರವಾಡ, ಸಾಂಗಲಿ, ಪುಣೆ, ಮೈಸೂರು, ಬೆಂಗಳೂರು, ಅಣ್ಣಾಮಲೈ ಇತ್ಯಾದಿ ಸ್ಥಳಗಲ್ಲಿ ವಿದ್ಯಾರ್ಜನೆ ಮಾಡಿ ಸ್ವಗ್ರಾಮಕ್ಕೆ ವಾಪಸ್ಸಾದಾಗ, ಅವರ ತಂದೆಯವರಾದ ಶ್ರೀತಿಮ್ಮಣ್ಣಾಚಾರ್ಯರು " ನನ್ನ ಐದು ಪುತ್ರರಲ್ಲಿ ಒಬ್ಬನಾದ ಕೃಷ್ಣನು 8ನೇ ವಯಸ್ಸಿಗೆ ಕಳೆದು ಹೊಗಿ, 22ನೇ ವಯಸ್ಸಿಗೆ ಮರಳಿ ಬಂದನೆಂದು" ಆಗಾಗ ಹೇಳುತ್ತಿದ್ದರಂತೆ.

ಗಲಗಲಿಯಲ್ಲಿ ಶುಕ್ಲ ಯಜುರ್ವೇದ 'ಮುಹೂರ್ತ ಮಾರ್ತಾಂಡ' ಹಾಗೂ ಆನೇಕ ಕಾವ್ಯ, ಕೋಶಗಳನ್ನು ಅಭ್ಯಸಿಸಿ, ಧಾರವಾಡದಲ್ಲಿ ಶ್ರೀ ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯಲ್ಲಿ ವ್ಯಾಕರಣ ಹಾಗೂ ಪ್ರಾಥಮಿಕ ತರ್ಕ ಶಾಸ್ತ್ರ ಗ್ರಂಥಗಳ ಜೊತೆಗೆ, ಸಂಸ್ಕೃತ ಕಾವ್ಯ, ನಾಟಕ ಮತ್ತು ಸಾಹಿತ್ಯ ಗ್ರಂಥಗಳ ಅಧ್ಯಯನ, ನಂತರ ಸಾಂಗ್ಲಿಯಲ್ಲಿ "ವ್ಯುತ್ಪತ್ತಿ" ಪರೀಕ್ಷೆಯಲ್ಲಿ ಉತ್ತೀರ್ಣರಾದವರಲ್ಲಿ ಏಕೈಕರೆನಿಸಿದರು ಪುಣೆಯಲ್ಲಿ 'ವೇದಶಾಸ್ತ್ರೋತ್ತೇಜಕ' ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದರು. ಹೆಚ್ಚಿನ ಶಾಸ್ತ್ರಾಭ್ಯಾಸಕ್ಕಾಗಿ ಮೈಸೂರಿನ ಮಹಾರಾಜ ಸಂಸ್ಕೃತ ಮಹಾಪಾಠ ಶಾಲೆ ಸೇರಿಕೊಂಡು, ಅಲ್ಲಿ 5–6 ವರ್ಷಗಳವರೆಗೆ ನವೀನ ನ್ಯಾಯ, ಮೀಮಾಂಸಾ ತರ್ಕ ಮತ್ತು ವ್ಯಾಕರಣಗಳನ್ನು ಅಭ್ಯಸಿಸಿದರು. ಮೈಸೂರು ಮಹಾರಾಜದಿಂದ "ನ್ಯಾಯ ವಿದ್ವಾನ್" ಎಂಬ ಪದವಿಯೊಂದಿಗೆ ಪ್ರಥಮರಾಗಿ ಉತ್ತೀರ್ಣರೆನಿಸಿದ್ದಕ್ಕೆ ಸುವರ್ಣ ಪದಕ ದೊರಕಿದ್ದು ಬಹಳ ರೋಚಕ ಹಾಗೂ ಹೆಮ್ಮೆಯ ವಿಷಯವೇ ಸರಿ. ಈ ವಿದ್ಯಾರ್ಜನೆಯ ಅವಧಿಯಲ್ಲಿ ಅವರ ಸಹಪಾಟಿಗಳಲ್ಲಿ ಉಲ್ಲೇಖನೀಯ ವ್ಯಕ್ತಿಗಳು ಶ್ರೀಕೆ.ಟಿ.ಪಾಂಡುರಂಗಿ ಹಾಗೂ ಉತ್ತರಾಧಿಮಠದ ಶ್ರೀಸತ್ಯಪ್ರಮೋದತೀರ್ಥರು (ಪೂರ್ವಾಶ್ರಮದಲ್ಲಿ).

ಶ್ರೀ ಕೆ.ಟಿ. ಜೋಶಿಯವರ ಜ್ಞಾನಾರ್ಜನೆಯ ಪಿಪಾಸೆಯು ಎಷ್ಟು ತೀಕ್ಷ್ಣವಾಗಿತ್ತೆಂದರೆ ಈ 10–15 ವರ್ಷದ ವಿದ್ಯಾಭ್ಯಾಸದಲ್ಲಿ ಅವರಿಗೆ ಯಾವ ಅನುಕೂಲತೆಗಳು ಇಲ್ಲದಿದ್ದರು ತಮ್ಮ ಧ್ಯೇಯ ಸಾಧನೆಯನ್ನು ಪೂರೈಸಿದರು. ವಾಸಿಸಲು ಗುಡಿ–ಗುಂಡಾರಗಳು, ಧರ್ಮ ಛತ್ರಗಳು, ಊಟದ ವ್ಯವಸ್ಥೆಗೆ ವಾರಾನ್ನ,

ಓದಲು ದಾರಿ ದೀಪಗಳು, ಕೆಲವೊಮ್ಮೆ ಹಾಸಿಗೆ, ಚಾಪೆಗಳನ್ನು ಮರದಲ್ಲಿಟ್ಟು ವಿದ್ಯಾಭ್ಯಾಸ ಮುಂದುವರೆಸಿದುದು, ಎಷ್ಟೇ ಕಷ್ಟ ಕಾರ್ಪಣ್ಯಗಳಿದ್ದರೂ ತಮ್ಮ ಗುರಿ ಮುಟ್ಟುವ ತನಕ ಹಿಂದೇಟು ಹಾಕದಿರುವ ಅವರ ಮನೋದಾರ್ಢ್ಯ ಹಾಗೂ ಛಲ ಪ್ರವೃತ್ತಿಯು ಶ್ಲಾಘನೀಯವಾದುದು.

ವಿದ್ಯಾಭ್ಯಾಸ ಪೂರೈಸಿದ ನಂತರ ಸ್ವಗ್ರಾಮಕ್ಕೆ ಬಂದು, ಜೀವನೋಪಾಯಕ್ಕೆ ಪೌರೋಹಿತ್ಯ ಹಾಗೂ ಜ್ಯೋತಿಷ್ಯ ಶಾಸ್ತ್ರ (ಕುಲ ವೃತ್ತಿಗಳು) ಗಳನ್ನು ಅರಸದೆ, ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡರು. ತಮ್ಮೂರಿನಿಂದ 15 ಕಿ.ಮೀ ದೂರದಲ್ಲಿದ್ದ ಬಾಗಲಕೋಟೆಯ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಶಂಕರಪ್ಪ ಸಕ್ರಿ ಪ್ರೌಢಶಾಲೆಯಲ್ಲಿ ಹಿಂದಿ ಹಾಗೂ ಸಂಸ್ಕೃತ ಉಪಾಧ್ಯಾಯರಾಗಿ ನೇಮಕಗೊಂಡರು. ಅಲ್ಲಿಯೇ (1942 ರಿಂದ 1975) 33 ವರ್ಷಗಳ ದೀರ್ಘಾವಧಿ ಸೇವೆ ಸಲ್ಲಿಸಿದರು. 15 ವರ್ಷದ ಸೇವೆಯ ನಂತರ ಮೈಸೂರಿನಲ್ಲಿ ಸಂಪಾದಿಸಿದ ವಿದ್ವತ್‌ಪದವಿಯನ್ನು ಸಂಸ್ಕೃತ ಎಂ.ಎ.ಗೆ ಸಮಾನ ಎಂದು ಪರಿಗಣಿಸಿ ಪ್ರೌಢಶಾಲೆಯ ಜೊತೆಗೆ ಜೂನಿಯರ್ ಕಾಲೇಜಿಗೂ ಅಧ್ಯಾಪಕರಾಗಿ ನಿಯಮಿಸಲ್ಪಟ್ಟು ಸಂಬಳದಲ್ಲಿ ಏಳ್ಗೆ ಪಡೆದರು.

ಶ್ರೀಯುತರು ಮಿತಭಾಷಿಗಳು, ಅತಿ ಮೃದು ಸ್ವಭಾವದವರು, ಜೀವನದಲ್ಲಿ ಎಲ್ಲ ತರಹದ ಶಿಸ್ತು ಪಾಲನೆಗೆ ಪ್ರಾಶಸ್ತ್ಯ, ಸಮಯ ಪಾಲನೆಯಲ್ಲಿ ಎತ್ತಿದ ಕೈ ಉಡುಪು ಯಾವಾಗಲೂ ಶುಭ್ರ ವಸ್ತ್ರ – ತೆಳು ಅಂಚಿನ ಬಿಳಿ ಧೋತ್ರ (ಕಚ್ಚೆ ಪಂಚೆ), ನಿಲುವಂಗಿ (ನೆಹರೂ ಶರ್ಟ್) ಹಾಗೂ ಬಿಳಿ ಗಾಂಧೀ ಟೋಪಿ (ಖಾದಿ): ಧ್ವನಿ ಏರಿಸಿ ಎಂದೂ ಮಾತಾಡಿದ್ದನ್ನು ಯಾರೂ ನೋಡಿಲ್ಲ. ಶಿಕ್ಷಕರ ಬೋಧನೆ ಕ್ರಮಕ್ಕಿಂತಲೂ ಅವರ ನಡೆ, ನುಡಿ ಮತ್ತು ಜೀವನ ಕ್ರಮವನ್ನು ನೋಡಿಕೊಂಡು ಅನುಸರಿಸುವಲ್ಲಿ ವಿದ್ಯಾರ್ಥಿಗಳು ಸಾಕಷ್ಟು ಕಲಿಯುವರೆಂಬ ವಿಷಯದಲ್ಲಿ ದೃಢವಾದ ವಿಶ್ವಾಸವಿತ್ತು. ಮನೆಯಲ್ಲಿಯೂ ನಿತ್ಯ ಸಂಧ್ಯಾ ವಂದನೆ, ದೇವರ ಪೂಜೆ, ಪುನಸ್ಕಾರಗಳು, ಸಾಯಂಕಾಲ ಸಂಧ್ಯೆಯೊಂದಿಗೆ ಅಷ್ಟಾವಧಾನ ಸಹಿತ ಭಜನೆ ಸಂಗೀತಗಳು ಚಾಚೂ ತಪ್ಪದೇ ನೆರವೇರಿಸುತ್ತಿದ್ದರು. 1942ರಲ್ಲಿ ಶಿಕ್ಷಕರಾಗಿ ನೇಮಕಗೊಂಡ ಎರಡು ವರ್ಷಗಳಲ್ಲಿ ವೈವಾಹಿಕ ಜೀವನದ ಪ್ರವೇಶ. ಇಳಕಲ್ ಗ್ರಾಮದ ಶಿಕ್ಷಕ ಹಾಗೂ ಆಯುರ್ವೇದ ವೈದ್ಯರಾಗಿದ್ದ ಶ್ರೀ ರಂಗಾಚಾರ್ಯ ಕೋಡಿಹಾಳರ ತೃತೀಯ ಪುತ್ರಿ ಕುಂ.ಸೌ॥ ಕಮಲಾ ಎಂಬ ಕನ್ಯೆಯ ಜತೆಗೆ ವಿವಾಹವಾಯಿತು.

ಶಿಕ್ಷಕ ವೃತ್ತಿಯಲ್ಲಿದ್ದಾಗಲೇ "ಕನ್ನಡ ವ್ಯಾಕರಣ" ಗ್ರಂಥವನ್ನು ರಚಿಸಿ ಪ್ರಕಾಶಿಸಿದ ಹಿರಿಮೆ ಇವರದು. ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದು 10ನೇ ತರಗತಿಗೆ ಪಠ್ಯ ಪುಸ್ತಕವಾಗಿ ಪ್ರಕಾಶಿಲ್ಪಟ್ಟಿತು. "ಚಂಪೂ ಕಾವ್ಯಗಳು" ಎಂಬ ಇನ್ನೊಂದು ಕೃತಿ ಪದವಿ ಪರೀಕ್ಷೆಗೆ (ಬಿ.ಎ) ಪಠ್ಯೇತರ ಪುಸ್ತಕವೆಂದು ಪರಿಗಣಿಸಲ್ಪಟ್ಟಿತು. ಅಧ್ಯಾಪನದ ಜೊತೆಗೆ ಅಧ್ಯಯನವೂ ನಡೆದೇ ಇತ್ತು. ರಾಮಾಯಣ, ಮಹಾಭಾರತ, ಭಾಗವತಾದಿ ಪುಸ್ತಕಗಳ ಸಂಗ್ರಹ, ವೇದ ವಾಙ್ಮಯದ ತಾಳೆಗರಿ ಪುಸ್ತಕಗಳು ಮನೆಯಲ್ಲಿ ವಿಪುಲವಾಗಿ ಸೇರಿದ್ದವು.

ಶ್ರೀಮದುತ್ತರಾದಿ ಮಠದ ಖ್ಯಾತ ವಿದ್ವಾಂಸರಾದ ಶ್ರೀಯುತ ಕೇಶವಾಚಾರ್ಯ ಕಟ್ಟಿಯವರು ಆಗ ಬಾಗಲಕೋಟೆಯ ಮುನಿಸಿಪಾಲಿಟಿ ಆಫೀಸ್‌ನಲ್ಲಿ ಚೀಫ್ ಆಫೀಸರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಅವರಲ್ಲಿ ಕ್ರಮಬದ್ಧವಾಗಿ ಸರ್ವಮೂಲ ಗ್ರಂಥಗಳ ಪಾಠ ಪ್ರಾರಂಭಿಸಿದರು. 8–10 ವರ್ಷಗಳಲ್ಲಿ ಶ್ರೀಮನ್ ನ್ಯಾಯಸುಧಾ ಸಹಿತ ಎಲ್ಲ ಮಾಧ್ವ ಪ್ರಮೇಯ ಗ್ರಂಥಗಳ ಆಳ ಅಭ್ಯಾಸ ಅವರ ಜೀವನದ ಕ್ರಮವನ್ನೇ ಬದಲಾಯಿಸಿತೆಂದು ಹೇಳಿದರೆ ತಪ್ಪಾಗಲಾರದು.

ಮಹಾರಾಷ್ಟ್ರದ ಪುಣೆ, ನಾಸಿಕಗಳಿಗಿಂತ ಬೆಂಗಳೂರು ಸೇರಿದರೆ ತಮ್ಮ ಪಾಠ, ಪ್ರವಚನ, ಅಧ್ಯಯನ, ಅಧ್ಯಾಪನ ಹಾಗೂ ಕೃತಿಗಳ ರಚನೆ ಮತ್ತು ಪ್ರಕಾಶನಕ್ಕೆ ಅನುಕೂಲವಾಗುವುದೆಂದು ಎನಿಸಿ, ಬಾಗಲಕೋಟೆಯನ್ನು ಬಿಟ್ಟು ಬೆಂಗಳೂರಿಗೆ ಬಂದರು. ಪ್ರಕಾಶನಗರದ ಶ್ರೀರಾಘವೇಂದ್ರ ಸ್ವಾಮಿಗಳ ಸನ್ನಿಧಿ ಸಮೀಪದಲ್ಲಿದ್ದುದು, ಅದರ ಒಡನಾಟ. ಸಜ್ಜನರ ಸಹವಾಸ, ಸತ್ಸಂಗ, ಪಾಠ ಪ್ರವಚನ ಇತ್ಯಾದಿ ಚಟುವಟಿಕೆಗಳಿಗೆ ಬಹಳ ಅನುಕೂಲವೆನಸಿತು. ಚಿಕ್ಕ ಮಕ್ಕಳಿಂದ ಪ್ರಾರಂಭಿಸಿ, ವಯಸ್ಕರಿಗೆ ಹಾಗೂ ವೃದ್ಧರಿಗೂ ಸೇರಿ ಬೆಳಿಗ್ಗೆ 8 ರಿಂದ 12ವರೆಗೆ ಪಾಠಗಳು, ಸಾಯಂಕಾಲ, ಪ್ರಕಾಶನಗರ ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಶ್ರೀಮನ್ ಮಾಧ್ವ ಸಂಘ, ರಾಜಾಜಿನಗರ ಹಾಗೂ ಮಲ್ಲೇಶ್ವರಂ ಶ್ರೀ ಮಾಧ್ವ ಸಂಘಗಳಲ್ಲಿ ಪ್ರವಚನಗಳು ಸಾಂಗವಾಗಿ ನಡೆಯುತ್ತಿದ್ದವು. "ಶ್ರೀಮತ್ ಭಗವದ್ಗೀತಾ ಚಿಂತನ", "ಶುಕ್ಲ ಯಜುರ್ವೇದೀಯ ನಿತ್ಯಾಹ್ನಿಕ ಪದ್ಧತಿಗಳು" ಹಾಗೂ "ಶುಕ್ಲ ಯಜುವೇದೀಯರ ಸ್ಥಾನಮಾನಗಳು" ಎಂಬ ಕೃತಿಗಳನ್ನು ರಚಿಸಿ ಪ್ರಕಾಶನಗೊಳಿಸಿದರು.

ಮಲ್ಲೇಶ್ವರಂ ಮಾಧ್ವ ಸಂಘದಲ್ಲಿ ಏರ್ಪಡಿಸಿದ ಅನೇಕ ಪ್ರವಚನಗಳನ್ನು ಆಲಿಸಿದ ಶ್ರೀ ಬಿ.ಎನ್.ವಾಸುದೇವರಾವ್ ಎಂಬ ವಕೀಲರು ಬಹಳ ಪ್ರಭಾವಿತರಾಗಿ ನನ್ನ ತಂದೆಯವರನ್ನು ಆಗಾಗ ತಮ್ಮ ಮನೆಗೆ ಆಹ್ವಾನಿಸುತ್ತಿದ್ದರು. 17ನೇ ಕ್ರಾಸ್, ಮಲ್ಲೇಶ್ವರಂನಲ್ಲಿ ಅವರ ಮನೆ, ತಮ್ಮ ಮನೆಯ ಮುಂದಿನ ಭಾಗದಲ್ಲಿ ವಿಶಾಲವಾದ 40ಥ60 ನಿವೇಶನವನ್ನು ಖರೀದಿಸಿ ರಾಘವೇಂದ್ರಾಶ್ರಮವನ್ನು ಕಟ್ಟಿಸಿದ್ದರು. ಆಗಾಗ ವಿದ್ವತ್ ಸಭೆಗಳನ್ನು ಏರ್ಪಡಿಸಿ ಜ್ಞಾನ ಕಾರ್ಯಗಳನ್ನು ನಡೆಸುತ್ತಿದ್ದರು. ಶ್ರೀಮತ್ ಉತ್ತರಾದಿ ಮಠಾಧೀಶರಾದ ಶ್ರೀ ಶ್ರೀ ಶ್ರೀ 1008 ಸತ್ಯ ಪ್ರಮೋದ ತೀರ್ಥರು, ಪೇಜಾವರ ಮಠಾಧೀಶರಾದ ಶ್ರೀ ಶ್ರೀ ಶ್ರೀ 1008 ಶ್ರೀ ವಿಶ್ವೇಶ ತೀರ್ಥರು, ಫಲಿಮಾರು ಮಠಾಧೀಶರಾದ ಶ್ರೀ ಶ್ರೀ ಶ್ರೀ 1008 ಶ್ರೀ ವಿದ್ಯಾಮಾನ್ಯ ತೀರ್ಥರು ಸಾಕಷ್ಟು ಸಲ ಭೇಟಿ ನೀಡಿ ಇವರ ಜ್ಞಾನ ಕಾರ್ಯಕ್ಕೆ ಪ್ರಶಂಸೆ ನೀಡುತ್ತಿದ್ದರು. ಶ್ರೀ.ಕೆ.ಟಿ.ಜೋಷಿಯವರನ್ನು ಈ ರಾಘವೇಂದ್ರಾಶ್ರಮದಲ್ಲಿರಿಸಿ, ಉಪಚರಿಸಿ ಶ್ರೀಮದಾನಂದ ತೀರ್ಥ ವಿರಚಿತ ಸರ್ವಮೂಲ ಗ್ರಂಥಗಳಲ್ಲಿ ಒಂಭತ್ತು ಗ್ರಂಥಗಳ ಅರ್ಥ ಸಹಿತ ಕನ್ನಡಾನುವಾದವನ್ನು 2–3 ವರ್ಷಗಳ ಅವಧಿಯೊಳಗೆ ಬರೆಸಿದರು.

ಇವುಗಳ ಜೊತೆಗೆ ಇನ್ನೂ ನಾಲ್ಕು ಗ್ರಂಥಗಳನ್ನು ಅರ್ಥ ಸಹಿತ ಕನ್ನಡಕ್ಕೆ ಅನುವಾದಿಸಿಕೊಟ್ಟರು. ಶ್ರೀರಾಘವೇಂದ್ರ ಯತಿ ಕೃತ "ಪ್ರಾತ: ಸಂಕಲ್ಪ ಗದ್ಯ", "ವಾಯು ಪುರಾಣಾಂತರ್ಗತ ಮಾಧವಸ್ತವರಾಜ ಸ್ತೋತ್ರ" ಮಧ್ವನವಮೀ ಸಂದೇಶ", ಉತ್ತರಾದಿ ಮಠದ ವಿದ್ವಾಂಸರಾದ ಶ್ರೀ ಆನೇಕಲ್ ರಾಮಾಚಾರ್ಯರಿಂದ ರಚಿಸಿದ ಗ್ರಂಥದ ಅಧಾರದಿಂದ "ಶುಕ್ಲ ಯಜುರ್ವೇದೀಯರ ಸ್ಥಾನಮಾನಗಳು". ಎಂಬ ಕೃತಿಯನ್ನು ರಚಿಸಿದರು.

ಈ ಮೊದಲು ವಿವರಿಸಿದಂತೆ, 14 ಗ್ರಂಥಗಳ ರಚನೆಯ ಹೊರತಾಗಿ ಶ್ರೀಗಳು ಅಶುಕವಿಯಾಗಿ ನಾಲ್ಕು ಪದ್ಯರೂಪದ ಸ್ತೋತ್ರಗಳನ್ನು ವಿರಚಿಸಿದ್ದಾರೆ. "ಶ್ರೀ ತಿರುಮಾಲಾಂಬಾ ಸ್ತೋತ್ರ", ಶ್ರೀ ವಿಠ್ಠಲಕೃಷ್ಣ ಪಂಚಕ""ಶ್ರೀ ವಾಮನ ತೀರ್ಥ ಸ್ತೋತ್ರ" ಹಾಗೂ "ಶ್ರೀ ಯಾಜ್ಞವಲ್ಕ್ಯ ಸುಪ್ರಭಾತಂ" ಎಂಬುವೇ ಆ ಪದ್ಯಗಳು. ಅವೆಲ್ಲ ಬಹು ಮನೋಹರವಾಗಿ, ಅರ್ಥಗರ್ಭಿತವಾಗಿ ಹಾಗೂ ಸುಂದರವಾಗಿ ರೂಪಗೊಂಡು, ಓದುಗರ ಪ್ರಶಂಸೆಗೆ ಅರ್ಹವಾಗಿದ್ದು, ಸಂತಸ ನೀಡುವ ಕೃತಿಗಳೆನಿಸವೆ.

1988 ರಲ್ಲಿ ಶ್ರೀವಿದ್ಯಾತಪೋನಿಧಿತೀರ್ಥರು ಪ್ರಾಯೋಪವೇಶ ವ್ರತ ಕೈಗೊಂಡಿರುವಾಗ ಶ್ರೀಪಾದಂಗಳವರು ಶ್ರೀ.ಕೆ.ಟಿ.ಜೋಷಿಯವರನ್ನು ಕರೆದುಕೊಂಡು ಬರಲು ಶ್ರೀದೇವರು ವಕೀಲರು ಮತ್ತು ಡಾ॥ ಭೀಮಸೇನಾಚಾರ್ಯ ಗುಡದೂರು ಇವರನ್ನು ಕಳುಹಿಸಿಕೊಟ್ಟರು. ಆ ಪ್ರಕಾರ ಜೋಷಿಯವರು ಮಠಕ್ಕೆ ಬರಲು ಮುಂದಿನ ಪೀಠಾಧಿಕಾರಿ ನೀವೇ ಆಗಬೇಕೆಂದು ಆಜ್ಞಾಪಿಸಿದರು. ಜೋಷಿಯವರು ಶ್ರೀಗಳವರಿಂದ ಆಜ್ಞಾಪಿಸಲ್ಪಟ್ಟವರಾಗಿ ತಮ್ಮ ನಾಲ್ಕು ಜನ ಪುತ್ರರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳನ್ನು ಸೇರಿಸಿ ವಿಚಾರ ವಿನಿಯಮಗೈದು "ನನ್ನ ಸಾಂಸಾರಿಕ ಜವಾಬ್ದಾರಿಗಳು ಮುಗಿದಿವೆ. ಯಾವ ತರಹದ ಜವಾಬ್ದಾರಿಗಳು ಉಳಿದಿಲ್ಲ. ಮೂಲ ದೇವರಾದ ಶ್ರೀ ವಿಠಲ ಕೃಷ್ಣನ ಪೂಜೆಗೈಯ್ಯುವ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಒಳ್ಳೆಯ ಪುಣ್ಯ ಸಂಪಾದನೆಯ ಸಂದರ್ಭ, ಯಾವ ಅಡೆ ತಡೆಗಳನ್ನೊಡ್ಡದೇ ಎಲ್ಲರೂ ಈ ಪ್ರಸ್ತಾಪಕ್ಕೆ ಆಸ್ತು ಅನ್ನಬೇಕು" ಎಂದು ತಮ್ಮ ನಿರ್ಧಾರ ತಿಳಿಸಿದರು.

ದಿನಾಂಕ: 04–04–1988ರಂದು ವಿಧ್ಯುಕ್ತ ರೀತಿಯಲ್ಲಿ "ಸಂನ್ಯಾಸ ಸ್ವೀಕಾರ" ಕಾರ್ಯಕ್ರಮಗಳು ಶ್ರೀ ಶ್ರೀ ಶ್ರೀ 1008 ಶ್ರೀವಿದ್ಯಾತಪೋನಿಧಿಗಳ ಆದೇಶದಂತೆ ಸಾಂಗವಾಗಿ ನೆರವೇರಿದವು. ಶಿಷ್ಯರಿಂದ ಸ್ವೀಕರಿಸಿದ ಕಾವೀ ಬಟ್ಟೆ ಧರಿಸಿ, ಭವ್ಯ ಮೆರವಣಿಗೆಯಲ್ಲಿ ಭಕ್ತಜನರೊಂದಿಗೆ ಹುಣಸಿಹೊಳೆ ಪುರ ಪ್ರವೇಶ ಎಲ್ಲವೂ ವಿಧಿವತ್ತಾಗಿ ಹಾಗೂ ಸಡಗರದಿಂದ ನೆರವೇರಿದವು. ಶ್ರೀ ಶ್ರೀ ಶ್ರೀ 1008 ಶ್ರೀವಿದ್ಯಾತಪೋನಿಧಿ ಶ್ರೀಗಳಿಂದ ಪ್ರಣವ ಮಂತ್ರೋಪದೇಶವಾಗಿ ಶ್ರೀ ಶ್ರೀ ಶ್ರೀ 1008 ಶ್ರೀವಿದ್ಯಾ ಭೂಷಣತೀರ್ಥರೆಂದು ನಾಮಾಂಕಿತರಾದರು. ಉಭಯ ಶ್ರೀಪಾದರ ಅನುಗ್ರಹ ಭಾಷಣಗಳಾದವು. ಇವರ ಆಶ್ರಮ ಸ್ವೀಕಾರದ ಎರಡು ತಿಂಗಳು ಕಳೆಯುವುದರಲ್ಲಿಯೇ ಹಿರಿಯ ಶ್ರೀಪಾದರು ವೃಂದಾವನಸ್ಥರಾದರು. ಅವರ ವೃಂದಾವನದ ವ್ಯವಸ್ಥೆಗಳು ಜೊತೆಗೆ ಅಲ್ಲಿ ಒಂದು ಶ್ರೀ ಯಾಜ್ಞವಲ್ಕ್ಯರ ದೇವಸ್ಥಾನವನ್ನು ನಿರ್ಮಿಸಿದರು. ಹುಣಸಿಹೊಳೆಯ ಗ್ರಾಮದಲ್ಲಿದ್ದ ಆಂಜನೇಯ ದೇವಸ್ಥಾನವನ್ನು ನವೀಕರಿಸಿದರು.

ಮೊದಲನೆಯ ಚಾತುರ್ಮಾಸ ಸಂಕಲ್ಪವನ್ನು ಬೆಂಗಳೂರಿನ ಮಲ್ಲೇಶ್ವರಂ ಬಡಾವಣೆಯಲ್ಲಿರುವ ಶ್ರೀ.ಬಿ.ಎನ್. ವಾಸುದೇವರಾಯರ ಆಶ್ರಯದಲ್ಲಿದ್ದ "ಶ್ರೀ ರಾಘವೇಂದ್ರಾಶ್ರಮ" ದಲ್ಲಿ ಶ್ರೀ. ವಾಸುದೇವರಾಯರ ಆಗ್ರಹದ ನಿಮಂತ್ರಣ ಮೇರೆಗೆ ಕೈಗೊಂಡರು. ಬೆಂಗಳೂರಿನ ಮೇಯರರ ಉಪಸ್ಥಿತಿಯಲ್ಲಿ ಪುರ ಪ್ರವೇಶ ಮಾಡಿ, ಶ್ರೀ.ಕೆ.ಟಿ. ಪಾಂಡುರಂಗಿ, ಶ್ರೀ ಆನಂದತೀರ್ಥ ನಾಗಸಂಪಿಗೆ ಮುಂತಾದ ಇನ್ನೂ ಅನೇಕ ವಿದ್ವಾಂಸರ ಸಮ್ಮುಖದಲ್ಲಿ ಚಾತುರ್ಮಾಸ ಶ್ರೀ ಬಿ.ಜಿ.

ಜಯರಾಮಾಚಾರ್ಯರ ನೇತೃತ್ವದಲ್ಲಿ ಬಹು ಸಂಭ್ರಮದಿಂದ ಸಾಗಿದವು. ಶ್ರೀ ಶ್ರೀ ಶ್ರೀ 1008 ಶ್ರೀ ಸತ್ಯಪ್ರಮೋದ ತೀರ್ಥರ ಆಶಯದಂತೆ ಶ್ರೀ ಮದುತ್ತರಾದಿ ಮಠದಲ್ಲಿ ಸಂಕಲ್ಪೋತ್ಥಾನದ ಅವಭೃತ ಸ್ನಾನದ ವ್ಯವಸ್ಥೆ ಮಾಡಲಾಗಿತ್ತು. ಒಟ್ಟಿನಲ್ಲಿ ಎಲ್ಲವೂ ವ್ಯವಸ್ಥಿತವಾಗಿ ಅವಿಸ್ಮರಣೀಯವಾಗಿ ಸಾಗಿತು.

ನಂತರ 1–2 ತಿಂಗಳು ಬಿದರಹಳ್ಳಿ, ಕೋಲಾರ, ದಳಸನೂರು, ಕುರುಡುಮಲೈ, ಚಿಂತಾಮಣಿ, ರಾಮನಗರ, ಮಂಡ್ಯ, ಮೈಸೂರು ಹಾಗೂ ಅನೇಕ ಊರುಗಳಲ್ಲಿ ಸಂಚಾರ ಕೈಗೊಂಡು ಭಕ್ತಾದಿಗಳಲ್ಲಿ ಧರ್ಮ ಜಾಗೃತಿ, ಆಚಾರ ವಿಚಾರಗಳ ಬಗ್ಗೆ, ಕಣ್ವ ಮಠದ ಇತಿಹಾಸ ಪರಂಪರೆಗಳ ಬಗ್ಗೆ ಪ್ರವಚನ ಹಾಗೂ ಅನುಗ್ರಹ ಸಂದೇಶಗಳನ್ನು ಹಂಚಿಕೊಂಡರು. ದಕ್ಷಿಣ ಕರ್ನಾಟಕ ಹಾಗೂ ಬೆಂಗಳೂರು ಸುತ್ತ ಮುತ್ತಲಿನ ಜನ ಹುಣಸಿಹೊಳೆಯನ್ನು ನೋಡಿಯೇ ಇರಲಿಲ್ಲ. ಎಲ್ಲರಿಗೂ ಆಹ್ವಾನ ನೀಡಿ ಆ ಕಡೆಯ ಜನ ನಮ್ಮ ಮಠದ ಮೂಲ ಸ್ಥಾನಗಳನ್ನು ನೋಡುವ ಅವಕಾಶ ಕಲ್ಪಿಸಿಕೊಡಲಾಯಿತು. ಇದೇ ಮಾದರಿಯಲ್ಲಿ ಎರಡನೆಯ ಚಾತುರ್ಮಾಸ ಮುಂಬಯಿ (ದೊಂಬವಲಿ) ಯಲ್ಲಿ ಮೂರನೆಯದು ಸಿಂಧನೂರಿನಲ್ಲಿ, ನಾಲ್ಕನೆಯದು ಪಂಡರಾಪುರ, ಐದನೆಯದು ಅಮ್ಮನಕಟ್ಟೆಯಲ್ಲಿ, ಆರನೆಯದು ಹಾಗೂ ಕೊನೆಯದನ್ನು ಬೆಂಗಳೂರಿನಲ್ಲಿ ಆಚರಿಸಲಾಯಿತು.

ಹುಣಸಿಹೊಳೆಯಲ್ಲಿ ವೇದ ಪಾಠಶಾಲೆ ಹಾಗೂ ಗುರು ಕುಲವನ್ನು ಪ್ರಾರಂಭಿಸಿ 1–2 ವರ್ಷಗಳವರೆಗೆ ನಡೆಯಿಸಿದರು. ವಿದ್ಯಾರ್ಥಿಗಳ ಅಭಾವದಿಂದ ಸ್ಥಗಿತಗೊಳಸಲಾಯಿತು. ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ, ಆಂಧ್ರ ಪ್ರದೇಶ ಹಾಗೂ ಮಹಾರಾಷ್ಟ್ರದ ಅನೇಕ ಸ್ಥಳಗಳಿಗೆ ಭೇಟಿ ನೀಡಿ, ಶಿಷ್ಯ ಸಂಪಾದನೆಯ ವಿಸ್ತೀಕರಣ ಮಾಡಲಾಯಿತು, ಎಲ್ಲ ಕಡೆಗಳಲ್ಲಿ ಅವರ ಉಪನ್ಯಾಸದ ವಿಷಯಗಳಲ್ಲಿ ಶ್ರೀಮದ್ಭಾಗವತ ಹಾಗೂ ಶ್ರೀಮದ್‌ಭಗವದ್ಗೀತೆ ಪ್ರಧಾನವಾಗಿರುತ್ತಿತ್ತು ಅವರ ಪ್ರವಚನ ಶೈಲಿ, ಭಾವ ಗಂಭೀರ ಭಾಷೆ, ವಿಷಯಗಳ ಹರವು ಹಾಗೂ ಸಂದೇಶಗಳನ್ನು ಪರಿಣಾಮಕಾರಿಯಾಗುವಂತೆ ಬೀರುವ ವಿಧಾನಗಳನ್ನು ಈಗಲೂ ಜನರು ನೆನಪಿಸಿಕೊಳ್ಳುತ್ತಾರೆ. ಹೋದಲ್ಲೆಲ್ಲಾ ಅವರು ಬೀರಿದ ಸಂದೇಶವೇನೆಂದರೆ ನಿಮ್ಮಲ್ಲಿ ದೈವ ಪ್ರಜ್ಞೆ ನಿಶ್ಚಿತವಾಗಿ ನೆಲೆಸಲಿ, ನಿತ್ಯ ಸಂಧ್ಯಾವಂದನೆ, ದೇವರ ಪೂಜೆ, ಅನುಷ್ಠಾನಗಳು ಸತತವಾಗಿ ಆಚರಿಸಲ್ಪಡಲಿ, ಇವೇ ನೀವು ಕೊಡಬೇಕಾದ ಪಾದ ಕಾಣಿಕೆ ಎಂದು ಪದೇ ಪದೇ ಹೇಳುತ್ತಿದ್ದುದು ಈಗಲೂ ಮನಸ್ಸಿನ ಹಿನ್ನೆಲೆಯಲ್ಲಿ ಧ್ವನಿಗೊಳ್ಳುತ್ತಿದೆ.

ಎಲ್ಲಾ ಭಕ್ತಾದಿಗಳಲ್ಲಿ ಅವರ ಕಳಕಳಿಯ ಸಂದೇಶವೇನೆಂದರೆ "ಎಲ್ಲರೂ ತಮ್ಮ ತಮ್ಮ ವಿಹಿತ ಕರ್ಮಾಚರಣೆಗಳಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಳ್ಳಿ, ದೈವ ಪ್ರಜ್ಞೆಯಿಂದ ನೀವು ಮಾಡುವ ಪ್ರತಿ ಚಟುವಟಿಕೆಯೂ ಪೂಜೆ ಎನಿಸುವುದು, ಈ ಪ್ರವೃತ್ತಿಯಿಂದ ನಿಶ್ಚಿತ ಜ್ಞಾನ, ಹಾಗೂ ಕಾರ್ಯದಲ್ಲಿ ಆಸಕ್ತಿ ಬೆಳೆಸಿಕೊಂಡು, ಜ್ಞಾನ, ಭಕ್ತಿ ಹಾಗೂ ವೈರಾಗ್ಯಗಳನ್ನು ಪಡೆದುಕೊಂಡು ಮೋಕ್ಷಾರ್ಥಿಗಳಾಗಿ ಬಾಳಿರಿ"

ತಮ್ಮ 5 ವರ್ಷಗಳ ಅವಧಿಯಲ್ಲಿ ಶ್ರೀಮತ್ ಕಣ್ವಮಠದ ಸರ್ವಾಂಗೀಣ ಅಭ್ಯುದಯಕ್ಕೆ ಎಲ್ಲೆ ಮೀರಿ ಶ್ರಮಿಸಿದರು, ಶಾಶ್ವತ ಪೂಜೆಗಳ ವ್ಯವಸ್ಥೆಯಿಂದ ಆರ್ಥಿಕ

ಪರಿಸ್ಥಿತಿಯನ್ನು ಉತ್ತಮಗೊಳಿಸಿದರು, ಮಠಕ್ಕೆ ವಾಹನದ ವ್ಯವಸ್ಥೆ ಮಾಡಿ, ಹಲವು ಲಕ್ಷಗಳ ಠೇವಣಿಗಳನ್ನು ಮಾಡಿ ಮಠದ ನಿತ್ಯ ವ್ಯವಹಾರಗಳಿಗೆ ಅನುಕೂಲ ಮಾಡಿಕೊಟ್ಟರು.

77 ವರ್ಷಗಳ ತಮ್ಮ ಜೀವನದಲ್ಲಿ ಯಾವ ಕಾಯಿಲೆಯನ್ನು ಅನುಭವಿಸದ ಶ್ರೀಗಳು ಕೊನೆಯ ಎರಡು ತಿಂಗಳುಗಳಲ್ಲಿ ಆರೋಗ್ಯದ ಹಲವಾರು ಏರುಪೇರುಗಳನ್ನು ಕಂಡು ಸಾಕಷ್ಟು ನೊಂದುಕೊಂಡರು, ಎಲ್ಲ ತರಹದ ತಪಾಸಣೆಗಳಲ್ಲಿ ಯಾವ ಕಾಯಿಲೆಯೂ ತಲೆದೋರಲಿಲ್ಲ, ಅಸ್ವಸ್ಥರಾದಾಗ ಶ್ರೀ ಶ್ರೀ ಶ್ರೀ 1008 ಶ್ರೀ ಸತ್ಯಪ್ರಮೋದ ತೀರ್ಥರು ಹಾಗೂ ಶ್ರೀ ಶ್ರೀ 1008 ಶ್ರೀ ವಿಶ್ವೇಶ ತೀರ್ಥರು ನಮ್ಮ ಶ್ರೀಗಳನ್ನು ಆಸ್ಪತ್ರೆಯಲ್ಲಿ ಭೇಟಿ ನೀಡಿ ಸಂತೈಸಿದರು. ಸ್ವಾಸ್ಥವಿಲ್ಲದಿದ್ದರೂ ಆಶ್ರಮ ನಿಯಮದಂತೆ ಚಾತುರ್ಮಾಸ್ಯ ಸಂಕಲ್ಪವನ್ನು ಕೈಕೊಳ್ಳಬೇಕೆಂದು ತೀರ್ಮಾನಿಸಿ ಅನುಗ್ರಹ ನೀಡಿದರು. ತಾವು ಹರಿಪಾದ ಸೇರುವ ದಿನಗಳು ಸಮೀಪ ಬಂದುವೆಂದು ತಿಳಿದು ತಮ್ಮ ಉತ್ತರಾಧಿಕಾರಿಯನ್ನಾಗಿ ರಾಯಚೂರಿನ ಶ್ರೀ ಎಸ್.ಟಿ.ದೇವರು, ವಕೀಲರು ಅವರನ್ನು ಆಯ್ಕೆಮಾಡಿ ಕಾಯಿಕೊಟ್ಟರು. ಗಣೇಶ ದೇವಸ್ಥಾನದ ಪ್ರವಚನ ಮಂದಿರದಲ್ಲಿ ಚಾತುರ್ಮಾಸ್ಯ ಸಂಕಲ್ಪ ಕೈಗೊಂಡು ಕೆಲವು ದಿನಗಳಲ್ಲಿಯೇ ಶ್ರೀವಿಠಲಕೃಷ್ಣ ಪೂಜೆಯಲ್ಲಿ ನಿರತರಾದಾಗಲೇ ಕೊನೆಯುಸಿರೆಳೆದರು.

ನೂತನ ಯತಿಗಳಾದ ಶ್ರೀ ಶ್ರೀ ಶ್ರೀ 1008 ಶ್ರೀ ವಿದ್ಯಾಭಾಸ್ಕರ ತೀರ್ಥರ ಆದೇಶದಂತೆ, ಶ್ರೀ ಬಿ.ಜಿ.ಜಯರಾಮಚಾರ್ಯರ ನೇತೃತ್ವದಲ್ಲಿ ಬಿದರಹಳ್ಳಿಯ ಶ್ರೀ ಯಾಜ್ಞವಲ್ಕ್ಯಾಶ್ರಮದ ಪರಿಸರದಲ್ಲಿಯೇ ವೃಂದಾವನ ಸ್ಥಾಪನೆಯು ತೀರ್ಮಾನವಾಯಿತು. ಸಾಯಂಕಲ 5 ಗಂಟೆಯೊಳಗಾಗಿ ಎಲ್ಲ ವ್ಯವಸ್ಥೆಗಳು ಸಂಪನ್ನಗೊಂಡವು. ಶ್ರೀಮತ್ ಕಣ್ವ ಮಠದ ಇತಿಹಾಸದಲ್ಲಿ ಒಂದು ಅಧ್ಯಾಯ ಸಮಾಪ್ತಿಯಾಯಿತು. (07.08.1993).

[1994] ಮಾರನೆಯ ವರುಷ ಶ್ರಾವಣ ಬಹುಳ ಚತುರ್ಥಿ, ಪಂಚಮಿ ಹಾಗೂ ಷಷ್ಠಿಯಂದು ಪ್ರಥಮ ಆರಾಧನೆಯ ವ್ಯವಸ್ಥೆಗಳೆಲ್ಲ ಸರಾಗವಾಗಿ ನೆರವೇರಿದವು. ಮೂರು ದಿನಗಳ ಉತ್ಸವ ಬಹು ವಿಜೃಂಭಣೆಯಿಂದ ಸಾಗಿದವು. ಶ್ರೀಗಳ ಪುನಃ ದರ್ಶನಕ್ಕೆ ಜನರು ಸಾಗರೋಪಾದಿಯಾಗಿ ಬಂದರು. ಅಂದಾಜು 4–5 ಸಾವಿರ ಜನ ರಾಜ್ಯದ ಹಾಗೂ ವಿವಿಧ ಪ್ರಾಂತಗಳ ಮೂಲೆ ಮೂಲೆಗಳಿಂದ ಬಂದು ಸೇರಿದ್ದರು. ತಮ್ಮ ಅನುಭವದಲ್ಲಿ ಬಂದ ಸನ್ನಿವೇಶಗಳ ನೆನಪಿನಲ್ಲಿ ಭಕ್ತಾಧಿಗಳು ಗುರುಗಳನ್ನು ಸ್ಮರಿಸಿ ಧನ್ಯತೆ ಪಡೆದರು. ಶ್ರೀ ನಾರಾಯಣಾಚಾರ್ಯ ಕೋಡಿಹಾಳ್ ಅವರು ಗುರುಗಳನ್ನು ಸ್ಮರಿಸಿಕೊಳ್ಳುತ್ತ ಎಂಟು ಶ್ಲೋಕಗಳ "ಶ್ರೀ ವಿದ್ಯಾಭೂಷಣ ತೀರ್ಥಾಷ್ಟಕ"ವನ್ನು ರಚಿಸಿದರು. ಇದೇ ತೀರ್ಥಾಷ್ಟಕವನ್ನು ಪ್ರತಿ ಆರಾಧನೆಯಲ್ಲಿಯೂ ಮೂರು ದಿನ 108 ಸಲ ಪುನಃಶ್ಚರಣೆಯೊಂದಿಗೆ ಅರ್ಚಿಸುವ ರೂಢಿಯನ್ನು ಇಟ್ಟುಕೊಳ್ಳಲಾಗಿದೆ.

ಈ ಮಾತಿಗೆ ಇಂದು 27 ವರ್ಷಗಳಾದವು. ಪ್ರತಿ ವರುಷವೂ ಮೂರು ದಿನಗಳ ಆರಾಧನೆಯನ್ನು ಸಕಲ ಭಕ್ತರೆಲ್ಲ ಸೇರಿಕೊಂಡು ಒಳ್ಳೆಯ ಶ್ರದ್ದೆ, ಭಕ್ತಿ, ಪ್ರೇಮಾದರಗಳಿಂದ ಚಾಚೂ ತಪ್ಪದೇ ನಡೆಸಿಕೊಂಡು ಬರಲಾಗಿದೆ. 25ನೇ ವರ್ಷದ

ಸಂದರ್ಭದಲ್ಲಿ (ಶ್ರೀಗಳ ಜನ್ಮ ಶತಮಾನೋತ್ಸವದ ನಿಮಿತ್ತವೂ ಹೌದು) ಗುರುಗಳ ಸ್ಮರಣಾರ್ಥ ಒಂದು ಸಂಚಿಕೆಯನ್ನೂ ಬಿಡುಗಡೆ ಮಾಡಲಾಯಿತು. ವಿವಿಧ ಮಠಾಧೀಶರ, ಹಲವು ವಿದ್ವಾಂಸರ, ಅವರ ಪ್ರಮುಖ ಶಿಷ್ಯರುಗಳ ಹಾಗೂ ಇನ್ನೂ ಅನೇಕ ಲೇಖಕರಿಂದ ಆಯ್ದುಕೊಂಡ ಅನಿಸಿಕೆಗಳು, ಅಪೂರ್ವ ಅನುಭವಗಳು ಹಾಗೂ ಕೆಲ ಪವಾಡಗಳು ಗುರುಗಳ ಧನ್ಯತೆಯನ್ನು ಮೆರುಗವಂತೆ ಮಾಡಿದೆ ಎನ್ನಲು ಅತಿಶಯೋಕ್ತಿ ಎನ್ನಿಸುವುದಿಲ್ಲ.

ಗುರುಗಳ ವೃಂದಾವನವು ಬಿದರಹಳ್ಳಿಯ ಯಾಜ್ಞವಲ್ಕ್ಯ ಆಶ್ರಮದ ಪರಿಸರದಲ್ಲಿ ಶೋಭಿತವಾಗಿದೆ. ಬಿದರಹಳ್ಳಿಯು ಬೆಂಗಳೂರು ಶಹರದ ಭಾಗವಾಗಿದ್ದು (ಬೆಂಗಳೂರು– 560049) ಕೆಂಪೇಗೌಡ ಬಸ್‌ಸ್ಟೇಶನ್ ಹಾಗೂ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ ನಿಂದ ಅಂದಾಜು 25–26 ಕಿ.ಮೀ ದೂರದಲ್ಲಿದ್ದು, ವಿವಿಧ ಸ್ಥಳಗಳಿಂದ ಬಸ್ ಮಾರ್ಗವಾಗಿ ತಲುಪಲು ಸುಲಭವಾಗಿದೆ. ವಿವರಗಳು ಕೆಳಗಿನಂತಿವೆ. (ಅರ್ಧ ಗಂಟೆಗೆ ಒಂದರಂತೆ ಬಸ್ಸುಗಳು ಅನೇಕ ಇವೆ).

1. ಕೆ.ಆರ್. ಮಾರ್ಕೆಟ್‌ನಿಂದ : ಬಿದರಹಳ್ಳಿ ಮಾರ್ಗ ರಾಂಪುರಕ್ಕೆ – 307
2. ಕೆ.ಆರ್. ಮಾರ್ಕೆಟ್‌ನಿಂದ : ಬಿದರಹಳ್ಳಿ ಮಾರ್ಗ ಗುಂಡೂರು – 308
3. ಕೆ.ಆರ್. ಮಾರ್ಕೆಟ್‌ನಿಂದ : ಬಿದರಹಳ್ಳಿ ಮಾರ್ಗ ಮಾರಸಂದ್ರ – 308 ಬಿ
4. ಕೆಂಪೇಗೌಡ ಬಸ್ ನಿಲ್ದಾಣದಿಂದ : ಬಿದರಹಳ್ಳಿ ಮಾರ್ಗ ಗುಂಡೂರು – 308ಎ
5. ಕೆಂಪೇಗೌಡ ಬಸ್ ನಿಲ್ದಾಣದಿಂದ : ಬಿದರಹಳ್ಳಿ ಮಾರ್ಗ ರಾಂಪುರ – 315ಎ
6. ಯಲಹಂಕದಿಂದ: ಬಿದರಹಳ್ಳಿ ಮಾರ್ಗ ಹೊಸಕೋಟೆಗೆ 280ಎಫ್, 289 ಎಲ್
7. ಶಿವಾಜಿನಗರದಿಂದ : ಬಿದರಹಳ್ಳಿ ಮಾರ್ಗ ಹೊಸಕೋಟೆಗೆ 301ಡಿ ಇಳಿಯುವ ಸ್ಥಳ : ಬಿದರಹಳ್ಳಿ
8. ಬೆಂಗಳೂರಿನಿಂದ ಹೊಸಕೋಟೆಗೆ ಹೋಗುವ ಬಸ್ಸಿನಲ್ಲಿ (ಪ್ರತಿ 10 –15 ನಿಮಿಷಕ್ಕೊಂದು ಬಸ್‌ಗಳಿವೆ) ಅವಲಹಳ್ಳಿಯಲ್ಲಿ ಇಳಿದು, ಅಲ್ಲಿಂದ 3 ಕೆ.ಮೀ ದೂರವಿರುವ ಬಿದರಹಳ್ಳಿಗೆ ಆಟೋದಲ್ಲಿ ಬರಬಹುದು.
9. ಮೆಟ್ರೋಗೆ ಬಂದರೆ, ಬೈಯುಪ್ಪನಹಳ್ಳಿಯಲ್ಲಿ ಇಳಿದು, ರೂಟ್ ನಂ. 317ರಲ್ಲಿ ಅವಲಹಳ್ಳಿಗೆ ಬಂದು ಅಲ್ಲಿಂದ ಆಟೋದಲ್ಲಿ ಬರಬಹುದು.

**ಆರಾಧನೆಯ ದಿನಗಳು.**

ಪ್ರತಿ ವರುಷ, ಶ್ರಾವಣಮಾಸ ಬಹುಳ ಚತುರ್ಥಿ, ಪಂಚಮಿ ಹಾಗೂ ಷಷ್ಠಿ ದಿನದಂದು ಕ್ರಮವಾಗಿ ಪೂರ್ವ, ಮಧ್ಯ ಹಾಗೂ ಉತ್ತರ ಆರಾಧನೆಗಳನ್ನು ಭಕ್ತರೆಲ್ಲ ಸೇರಿ ಬಹು ವಿಜೃಂಭಣೆಯಿಂದ ಆಚರಿಸುವುದನ್ನು ನೋಡುವುದೇ ಒಂದು ಹಬ್ಬವೆನಿಸುವುದು.

॥ **ಶ್ರೀ ವಿಠಲಕೃಷ್ಣಾರ್ಪಣಮಸ್ತು** ॥

ಲೇಖಕರು : **ಡಾ॥ ಅರವಿಂದ ಕೃಷ್ಣಾಚಾರ್ಯ ಜೋಶಿ,** ಬೆಂಗಳೂರು

ಫೋ.ನಂ : 9538846773

* * *